ಪ್ರಥಮ ಉಪದೇಶವೇ ಜಿಜ್ಞಾಸಾಕರ್ತವ್ಯ, ಸೂಕ್ಷ್ಮ – ಸೂಕ್ಷ್ಮಾತೀತ ವಸ್ತುಗಳನ್ನು ಅಲೌಕಿಕ ದೃಷ್ಟಿಯಿಂದ ವೀಕ್ಷಿಸುವಾಗ ಶರ್ಲಾಕ ಹೋಮ್ಸನ ಭೂತಕನ್ನಡಿಯೂ ಸಪ್ಪೆಯೆನಿಸುತ್ತದೆ.

ಕ್ರಿಸ್ತ ಶಕ ಒಂದನೇ ಶತಮಾನದಲ್ಲಿ ರಚಿಸಲ್ಪಟ್ಟಿದೆ ಎಂದು ಹೇಳುವ ಜೈನ ಪುರಾಣದ 'ವಡ್ಡಾರಾಧನೆ'ಯಲ್ಲಿ ಬರುವ ಪತ್ತೇದಾರಿಶಾಸ್ತ್ರ ಅಥವಾ ಅದರ ಪಾತ್ರಗಳು ಎಷ್ಟು ಸಶಕ್ತವಾಗಿದ್ದವು ಎಂಬುದನ್ನು ಗಮನಿಸಿದರೆ, ವಿಸ್ಮಯವಾಗದೇ ಇರದು. ಸಂಸ್ಕೃತದಲ್ಲಿ ಹರಿಷೇಣನೂ, ಕನ್ನಡದಲ್ಲಿ ಶಿವಕೋಟ್ಯಾಚಾರ್ಯರೂ ತಮ್ಮ ಕೃತಿಗಳಾದ 'ಬೃಹತ್ ಕಥಾಕೋಶ' ಮತ್ತು 'ವಡ್ಡಾರಾಧನೆ' ರಚಿಸಿದ್ದಾರೆ. 'ವಡ್ಡಾರಾಧನೆ'ಯಲ್ಲಿ ಬರುವ ತಳವಾರನೇ ಇಂದಿನ ಪತ್ತೇದಾರ. ಅವನ ಕಾರ್ಯತಂತ್ರವೇ ಪತ್ತೇದಾರಿಕೆ. ಸಮಸ್ತ ರಾಜ್ಯದ ರಕ್ಷಣೆ ಅವನಿಗೆ ಸೇರಿದ್ದು. ರಾಜ್ಯದ ಯಾವುದೇ ಭಾಗದಲ್ಲಿ 'ಗುನ್ಹೆ' ನಡೆದರೆ ರಾಜ ಕೂಡಲೇ ತಳವಾರನನ್ನು ಕರೆಸುತ್ತಿದ್ದ. ಪರಿಶೋಧನೆ ನಡೆಸಿ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಶೋಧ ಕಾರ್ಯದಲ್ಲಿ ತೊಡಗುವಂತೆ ಆಜ್ಞಾಪಿಸುತ್ತಿದ್ದ. ಒಂದು ವೇಳೆ ತಳವಾರ ತನ್ನ ಕರ್ತವ್ಯದಲ್ಲಿ ವಿಫಲನಾದರೆ ಶಿಕ್ಷೆಗೆ ಒಳಗಾಗುತ್ತಿದ್ದ. ಆಯಾ ಗುನ್ಹೆಗೆ ತಕ್ಕಂತೆ ಅವನಿಗೆ ಶಿಕ್ಷೆ ವಿಧಿಸಲಾಘುತ್ತಿತ್ತು. ಅಂದಿನ ಪತ್ತೇದಾರಿ ತಂತ್ರ ಅಥವಾ ಅಪರಾಧ ಪರಿಶೋಧನಾ ತಂತ್ರ ಇಲ್ಲವೇ ಸಂಹಿತೆ ಅಥವಾ ರಾಜನ ನ್ಯಾಯನಿರ್ಣಯ ಇಂದೂ ಜೀವಂತವಾಗಿದ್ದರೆ ಏನಾಗಬಹುದಿತ್ತು ಎಂಬುದು ತಮ್ಮ ವಿವೇಚನೆಗೆ ಬಿಟ್ಟ ವಿಷಯವಾಗಿದೆ.

**ಬೆಳವಣಿಗೆ**

ಈ ರೀತಿ ವೇದ, ಪುರಾಣ, ಮನುಸ್ಮೃತಿ, ಧಾರ್ಮಿಕ ಗ್ರಂಥಗಳು ಅಲ್ಲದೆ ಇತಿಹಾಸ ಪುಟಗಳಲ್ಲೂ ಸಹ ಪತ್ತೇದಾರಿ ತಂತ್ರಗಳು ಭಾರತೀಯರ ಪ್ರತಿಯೊಂದು ಮಹತ್ವದ ಕೃತಿಗಳಲ್ಲಿ ತಮ್ಮ ಮೇಲ್ಮೈ ಪ್ರದರ್ಶಿಸಿದ ಶ್ರೇಯಸ್ಸು ಕನ್ನಡ ಪತ್ತೇದಾರಿ ಸಾಹಿತ್ಯಕ್ಕೆ ಸೇರುತ್ತದೆ.

ಕನ್ನಡದ ಮೊತ್ತಮೊದಲ ಪತ್ತೇದಾರಿ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾದ 'ರಾತ್ರಿಚುಕ್ಕಿ ಮತ್ತು ಹಗಲು ಚುಕ್ಕಿ' ಎಂಬ ಚೋರರ ಕಥೆಯು ಒಂದು ಅಪರೂಪದ ಕೃತಿ. ಅಂದು ಬಳಕೆಯಲ್ಲಿದ್ದ ಹಳೆಗನ್ನಡದ ರೂಪದಲ್ಲಿರುವ ಈ ಕೃತಿಯ ಆರಂಭದಲ್ಲಿ ಗಣೇಶ ಹಾಗೂ ಸರಸ್ವತಿ ಸ್ತುತಿಗಳಿವೆ. ಪುಸ್ತಕದ ಮೇಲು ಹೊದಿಕೆಯ ಮೇಲೆಯೇ ಕೃತಿಯ, ಕೃತಿಕಾರನ ಹೆಸರು, ಅವುಗಳ ಜೊತೆಗೇ ಪ್ರಕಾಶಕರು, ಮುದ್ರಕರು ಮುಂತಾದ ಎಲ್ಲ ವಿವರ ನೀಡುವುದರೊಂದಿಗೆ ಪ್ರಕಟಣೆಗೆ ಸಹಾಯವಾದವರ 'ಋಣ' ಸ್ಮರಿಸಿದ್ದು ಒಂದು ವಿಶೇಷವೆನಿಸುತ್ತದೆ.

ಇಂಥ ವಿಶೇಷತೆಯೊಂದಿಗೆ ರಚನೆಗೆ ಆರಂಭವಾದ ಪತ್ತೇದಾರಿ ಕೃತಿಗಳು ಮೊದಲು ಬಂಗಾಲಿಯಿಂದ, ಕೆಲವೊಂದು ಮರಾಠಿಯಿಂದ, ನಂತರ ಇಂಗ್ಲೀಷಿನಿಂದ ಅನುವಾದಗೊಂಡು ಪ್ರಕಟವಾದವು. ಅಂದಿನ ಕಾಲದ ಅದ್ಭುತ, ಭಯಂಕರ, ಭೀಭತ್ಸ ಕಥಾತಂತ್ರಗಳನ್ನು ಓದಿದರೆ ಇಂದೂ ಮೈ ಜುಂ ಎನ್ನುತ್ತದೆ. ಪರಭಾಷೆಯ ನೆರಳಿನಿಂದ ಸರಿದು ಸ್ವತಂತ್ರವಾದ ಕೃತಿಗಳು ಮೊದ ಮೊದಲು ನಿಧಾನವಾಗಿ ಆರಂಭಗೊಂಡಿದ್ದು 1950ರಿಂದೀಚೆಗೆ. ಮೊದಮೊದಲು ಸ್ವತಂತ್ರ ಕೃತಿ ರಚನೆಗೆ ಮುಂದಾದವರು ಎಂ. ರಾಮಮೂರ್ತಿಯವರು. ವೀರಕೇಸರಿ ಸೀತಾರಾಮ ಶಾಸ್ತ್ರಿಗಳ ಪುತ್ರರಾದ ಇವರು 'ವಿನೋದಿನಿ ಪ್ರಕಟನಾಲಯ'ದ ಮೂಲಕ ಆರಂಭಿಸಿದರು. 'ಮುತ್ತಿನ ಬಳೆಯವಳು', 'ಯಾರವನು?', 'ಕಾಲುವೆಮನೆ', 'ಆ ಸುಂದರಿಯರು' ಮುಂತಾದ ಅನೇಕ ಪ್ರಕಟಣೆಗಳ ನಂತರ ಪತ್ತೇದಾರ ಪುರುಷೋತ್ತಮನ ಜನ್ಮದಾತ ಎನ್. ನರಸಿಂಹಯ್ಯನವರು 'ಪತ್ತೇದಾರ ಪುರುಷೋತ್ತಮ' ಕಾದಂಬರಿ ಮೂಲಕ ಈ ರಂಗಕ್ಕೆ ಪಾದಾರ್ಪಣೆ ಮಾಡಿದರು. ಮುಂದೆ ಪತ್ತೇದಾರಿ ಪುಸ್ತಕಗಳ ಮಹಾಪೂರವೇ ಬಂದಿತೆಂದು ಹೇಳಬಹುದು. ಪೆಂಗ್ವಿನ್ ಪ್ರಕಟಣೆಯ ಮಾದರಿಯಲ್ಲೇ 'ಆರಾಣೆ ಮಾಲೆ', 'ಎಂಟಾಣೆ ಮಾಲೆ'ಗಳ ನೂರಾರು ಪತ್ತೇದಾರಿ ಪುಸ್ತಕಗಳು ಓದುಗರನ್ನು ರಂಜಿಸಿದವು.

ಕನ್ನಡದ ಹಿರಿಯ ಸಾಹಿತಿಗಳೂ ಸಹ ಪತ್ತೇದಾರಿ ಸಾಹಿತ್ಯದ ಮೋಹಕ್ಕೆ ಬಲಿಯಾಗಿರುವುದು ಒಂದು ಮಹತ್ವದ ಸಂಗತಿ. ಶಿವರಾಮ ಕಾರಂತರು 1940ರಲ್ಲಿ 'ವಿಚಿತ್ರಕೂಟ', ಆದ್ಯರಂಗಾಚಾರ್ಯ ಶ್ರೀರಂಗರು 1942ರಲ್ಲಿ 'ಭರಮಪ್ಪನ ಭೂತ', ಕೆ.ವಿ. ಅಯ್ಯರ್ ಅವರು 1950ರಲ್ಲಿ 'ದಯ್ಯದ ಮನೆ' ಪತ್ತೇದಾರಿ ಕೃತಿಗಳನ್ನು ರಚಿಸಿ ಈ ಸಾಹಿತ್ಯದ ಮೌಲ್ಯ ಹೆಚ್ಚಿಸಿದರು ಎಂದರೆ ತಪ್ಪಾಗದು.

ಎಂ. ರಾಮಮೂರ್ತಿ ಅವರು ಆಕರ್ಷಕ ಕತೆ,